## ಅಕ್ಷಮ್ಯ ಸಂಪ್ರದಾಯ

‘ಹಾಡು ಕೆಟ್ಟ ಮೇಲೆ...’ (ಏ. 02, ವಿಶಾಖ ಎನ್.) ಕನ್ನಡ ಸಿನಿಮಾದ ಹಾಡೊಂದು ಪ್ರೇಕ್ಷಕರ ಅಭಿರುಚಿಯ ಬಗ್ಗೆ ಕೆಲವರು ಹೊಂದಿರುವ ಅತ್ಯಂತ ಕೀಳು ಮನೋಭಾವನೆಯನ್ನು ಮತ್ತೊಮ್ಮೆ ಜಗಜ್ಜಾಹೀರುಗೊಳಿಸಿದೆ. ಲೇಖಕರು ಹೇಳಿರುವಂತೆ ಮಹಿಳೆಯರ ಬಗ್ಗೆ ಏನೇ ಬರೆದರೂ, ತೆರೆಯ ಮೇಲೆ ಅವರನ್ನು ಹೇಗೇ ತೋರಿಸಿದರೂ ಅದನ್ನು ಆನಂದಿಸಿ ಆದರಿಸುವ (ಪುರುಷ?) ಪ್ರೇಕ್ಷಕರಿರುವವರೆಗೂ ಇಂತಹ ಅಸಹ್ಯ, ಅಕ್ಷಮ್ಯ ಸಂಪ್ರದಾಯ ಸದ್ದಿಲ್ಲದೇ ಮುಂದುವರೆಯಲಿದೆ. ಇದೇ ಪದ್ಧತಿ ಹಿಂಸೆಯನ್ನು ಪ್ರತಿಬಿಂಬಿಸುವ ದೃಶ್ಯಗಳಿಗೂ ಅನ್ವಯಿಸುತ್ತದೆ. ನನ್ನ ಪ್ರಕಾರ ನಾವೆಲ್ಲರೂ ಒಂದಾಗಿ ಇಂತಹ ಬಲವಂತದ ಮಾಘಸ್ನಾನವನ್ನು ಕಡ್ಡಾಯವಾಗಿ ನಿಲ್ಲಿಸುವವರೆಗೂ ಖಂಡಿಸಬೇಕು.

— ಶಕುಂತಲ ಕೆ.ಆರ್.




## ಕಡಿವಾಣಕ್ಕೆ ಸಮಯ ಬಂದಿದೆ

ಈಚೆಗೆ ಚರ್ಚೆಯಾದ ಹಾಡೊಂದರ ಸಾಹಿತ್ಯದ ಬಗ್ಗೆ ಗೀತ ರಚನೆಕಾರರ ಅನಿಸಿಕೆ, ಅಭಿಪ್ರಾಯಗಳನ್ನೊಳಗೊಂಡ ಬರಹ ಗಮನಸೆಳೆಯಿತು. ಈಗ ಸಾಮಾಜಿಕ ಜಾಲತಾಣವು ಬಹಳ ಪ್ರಭಾವಶಾಲಿ ಮಾಧ್ಯಮವಾಗಿದೆ. ಈ ಮೂಲಕ ಎಲ್ಲರೂ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯ ಹೊಂದಿದ್ದಾರೆ. ಈಗಿನ ಕೆಲವು ಹಾಡುಗಳ ಸಾಹಿತ್ಯ ಸಭ್ಯತೆಯ ಎಲ್ಲೆ ಮೀರುತ್ತಿದೆ. ಇವುಗಳಿಗೆ ಕಡಿವಾಣ ಹಾಕುವ ಸಮಯ ಇದೀಗ ಬಂದಿದೆ ಎನಿಸುತ್ತಿದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಹೊಸ ಬಗೆಯ ನಗೆ ಬರಹಗಳು...



‘ನಗುನಗುತಾ ನಲೀ ನಲೀ ಏನೇ ಆಗಲಿ’ (ಏ. 02, ರೂಪಾ ಕೆ.ಎಂ., ರಾಘವೇಂದ್ರ ಕೆ.), ಎಂದಿನಂತೆ ಈ ವರ್ಷದ ‘ಹಾಸ್ಯ ಸಂಚಿಕೆ’ಯಲ್ಲಿ ಹೊಸ ಬಗೆಯ ಬರಹಗಳು ಮುದನೀಡಿದವು.

ಮೊದಲಿಗೆ, ದೀಕ್ಷಾ ಎಸ್.ಎಂ. ಬ್ರಹ್ಮಾವರ ಅವರು ಈ ಯುದ್ಧದ ದಿನಗಳ ಸಂದರ್ಭದಲ್ಲಿ ಉಂಟಾಗಿರುವ ಗ್ಯಾಸ್ ಸಿಲಿಂಡರ್ ಕೊರತೆಯನ್ನೇ ಇಟ್ಟುಕೊಂಡು ಕಂಟೆಂಟ್ ಬರೆದಿರುವುದು ಇಷ್ಟವಾಯಿತು. ಅಂದಂದಿನ ವಸ್ತು, ವಿಷಯಗಳನ್ನೇ ಇಟ್ಟುಕೊಂಡು ಹಾಸ್ಯ ಸೃಷ್ಟಿಸಿರುವ ರೀತಿ ಮನಮುಟ್ಟುವಂತಿದೆ. ಹಾಸ್ಯ ಕಲಾವಿದರಾದ ರಾಘವೇಂದ್ರ, ದೀಪಿಕಾ ಅವರ ಮನದಾಳದ ಮಾತುಗಳು ಹೃದಯ ತಟ್ಟಿದವು. ಶ್ರವಣ್ ನಾರಾಯಣ್ ಅವರು ತಮ್ಮ ಕಾಶ್ಮೀರ ಪ್ರವಾಸದ ಅನುಭವಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಎಷ್ಟೋ ಸಲ ಇದು ನಮ್ಮ ಭಯವೂ ಆಗಿರುತ್ತದೆ. ಪಲ್ಲವಿ ಪಾಂಚಾಳ್ ಅವರ ವೃತ್ತಿಯ, ಜೀವನದ ಅನುಭವ ಕಥನಗಳು ನಗು ತರಿಸಿದವು. ಕಲೀಂ ಉಲ್ಲಾ ಅವರ ಅಧ್ಯಾಪಕ ವೃತ್ತಿಯ ಮೌಲ್ಯಮಾಪನ ಸಂದರ್ಭದಲ್ಲಿ ಬುದ್ಧಿವಂತ ಉತ್ತರಗಳನ್ನು ಓದಿ ಬಿದ್ದು ಬಿದ್ದು ನಗುವಂತಾಯಿತು! ಅವರ ಸ್ನೇಹಿತನ ಶ್ರದ್ಧಾಂಜಲಿ ಸಭೆ, ಅವರು ಬದುಕಿರುವುದು ತಿಳಿದ ಮೇಲೂ ‘ಕಣ್ಣೀರು ವೇಸ್ಟ್ ಆಯಿತು’ ಎಂದು ಹಳಹಳಿಸಿದ್ದು, ಈ ಹಾಸ್ಯ ರಸಧಾರೆಗೆ ಕಲಶವಿಟ್ಟಂತೆ ಇತ್ತು. ಒಟ್ಟಾರೆ ವೈವಿಧ್ಯಮಯವಾದ ಹಾಸ್ಯ, ಜೀವನದ ಅನುಭವಗಳು ರಂಜಿಸಿದವು.

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು

## ರಜಾ, ಕಾಣೆಯಾಗಿದೆ ಮಜಾ

‘ಬೇಸಿಗೆ ರಜೆ; ಮಕ್ಕಳ ಮನಸ್ಸು ಅರಳುವ ಸಮಯ’ (ಏ. 02, ಶೇಖರಯ್ಯ ಟಿ.ಎಚ್.ಎಂ.) ಬರಹ, ಹಲವು ಸಂಗತಿಗಳನ್ನು ನೆನಪಿಸಿತು. ವರ್ಷವಿಡೀ ಓದಿಗೆ ಪ್ರಾಮುಖ್ಯ ನೀಡಬೇಕಾದ ಮಕ್ಕಳಿಗೆ ರಜೆ ಎಂದರೆ ಖುಷಿ ಸಹಜ. ಆದರೆ ಇಂದಿನ ಪರಿಸ್ಥಿತಿಯಲ್ಲಿ ರಜೆಯ ಆ ಮಜಾ ಕಾಣೆಯಾಗಿದೆ. ಬೇಸಿಗೆ ರಜೆಯಲ್ಲಿ ಸಹ ಸಮ್ಮರ್ ಕ್ಯಾಂಪ್, ಮುಂಬರುವ ಶೈಕ್ಷಣಿಕ ವರ್ಷಕ್ಕೆ ತಯಾರಿ, ಟ್ಯೂಷನ್ ಕ್ಲಾಸ್ ಇತ್ಯಾದಿ, ಮಕ್ಕಳಿಗೆ ಒಂದು ರೀತಿ ಮಾರಕ ಎಂದರೂ ತಪ್ಪಾಗದು. ಪೋಷಕರಿಬ್ಬರೂ ನೌಕರಿಯಲ್ಲಿರುವ ಸಂದರ್ಭದಲ್ಲಿ ಈ ಬದಲಾವಣೆ ಅನಿವಾರ್ಯ. ಒಪ್ಪದೇ ಅನ್ಯ ದಾರಿಯಿಲ್ಲ. ವಿಷಾದವೆಂದರೆ ಮಕ್ಕಳು ಬಾಲ್ಯದಿಂದ ಮತ್ತು ನೆಂಟರಿಷ್ಟರಿಂದ ದೂರವಾಗುತ್ತಿರುವುದು.

—ರಾಜೀವ್ ಎನ್. ಮಾಗಲ್, ಹಾಸನ

## ಮೇಕಪ್ ಎಂಬ ಮಾಯಾವಿ

‘ಪ್ರಸಾಧನವೆಂಬ ಪರಿಭ್ರಮಣದೊಳಗೆ’ (ಏ. 02, ಜ್ಯೋತಿ ಡಿ. ಬೊಮ್ಮಾ) ಬರಹ ವಿಮರ್ಶಾತ್ಮಕವಾಗಿದೆ. ಮೇಕಪ್ ಎಂಬುದು ಈಗಿನ ಕಾಲದಲ್ಲಿ ಎಷ್ಟು ಮಹತ್ವ ಪಡೆದುಕೊಂಡಿದೆ ಎಂಬುದು ಗೊತ್ತಾಗುತ್ತದೆ. ಎಲ್ಲರಲ್ಲಿ ನಾನು ಮಿಂಚಬೇಕೆಂಬ ಧಾವಂತ. ಹಾಗಾಗಿ ಪಾರ್ಲರ್‌ಗಳು ನಾಯಿಕೊಡೆಗಳಂತೆ ತಲೆಯೆತ್ತಿ ಸಂಭ್ರಮಿಸಿ ಮೇಕಪ್ ಎಂಬ ಮಾಯಾವಿ ನಮ್ಮನ್ನು ಸೆರೆಹಿಡಿದಿದೆ.

—ಗುರುಲಿಂಗಪ್ಪ ಈ. ಬಿರಾದಾರ, ವಿಜಯಪುರ

## ಕರುನಾಡ ಹೆಮ್ಮೆ ಮೈಸೂರು ರೇಷ್ಮೆಸೀರೆ



‘ಕರುನಾಡ ಹೆಮ್ಮೆ ಮೈಸೂರ್ ಸಿಲ್ಕ್’ (ಏ. 02, ಕೃಷ್ಣಿ ಶಿರೂರ) ‘ಹೆಗ್ಗುರುತು’ ಅಂಕಣದಲ್ಲಿ ಕರ್ನಾಟಕದ ಹೆಮ್ಮೆ, ನಾರಿಯರ ಸೌಂದರ್ಯ ಇಮ್ಮಡಿಗೊಳಿಸುವ ಮೈಸೂರು ರೇಷ್ಮೆ ಸೀರೆ ಕುರಿತ ಲೇಖನ ಸೊಗಸಾಗಿದೆ. ಮೈಸೂರು ಪಾರ್ಕ್‌ನಷ್ಟೇ ರೇಷ್ಮೆ ಸೀರೆಯೂ ಪ್ರಸಿದ್ಧ. ಬೇಡಿಕೆಗೆ ತಕ್ಕಂತೆ ಪೂರೈಕೆ ಇಲ್ಲದಿರುವುದು ಬೇಸರ.

—ಚಂದ್ರಕುಮಾರ್ ಡಿ., ಬೆಂಗಳೂರು

## ಪ್ರಕೃತಿಯ ಸೊಬಗು ಸವಿಯೋಣ



‘ಬೇಸಿಗೆ ಪ್ರವಾಸಕ್ಕೆ ಬೆಸ್ಟ್ ತಾಣ ತಲಕಾಡು’ (ಏ. 02, ಉಮೇಶ ಭಟ್ಟ ಪಿ.ಎಚ್.) ಪ್ರವಾಸ ಲೇಖನ ಚೆನ್ನಾಗಿದೆ. ಇಷ್ಟೆಲ್ಲಾ ಚೆನ್ನಾಗಿರುವ ತಾಣಕ್ಕೆ ಪ್ರವಾಸಿಗರು ಭೇಟಿ ನೀಡಿ, ಸ್ನಾನ ಮಾಡಿ ಉಟ್ಟ ಬಟ್ಟೆಯನ್ನು ಬಿಡುವ ಚಾಳಿ ತೋರದೆ ಪರಿಸರಸ್ನೇಹಿಯಾಗಿ ವರ್ತಿಸಿ ಪ್ರಕೃತಿಯ ಸೊಬಗನ್ನು ಸವಿಯುವುದರಲ್ಲಿ ಅರ್ಥವಿದೆ. ನಾವೊಮ್ಮೆ ಭೇಟಿ ನೀಡಿದಾಗ ಉಟ್ಟ ಬಟ್ಟೆಯನ್ನು ನೀರಲ್ಲಿಯೇ ಬಿಟ್ಟ ಪ್ರವಾಸಿಗರನ್ನು ಪ್ರಶ್ನಿಸಿದಾಗ ಉಡಾಫೆಯಿಂದ ಉತ್ತರಿಸಿದ್ದರು. ಈ ನಡೆಗೆ ಕಡಿವಾಣ ಬಿದ್ದರಷ್ಟೇ ಪ್ರಕೃತಿ ಸೊಬಗನ್ನು ಆಸ್ವಾದಿಸಲು ಸಾಧ್ಯ.

—ಧನಲಕ್ಷ್ಮಿ ಪುರುಷೋತ್ತಮರಾವ್, ಕೋಲಾರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in